# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 615/2015 ಸಿಡಬ್ಲ್ಯೂ : 11 ಪಿಡಬ್ಲ್ಯೂಃ 7

ಪ್ರಮಾಣವಚನ ಬೋಧಿಸಲಾಯಿತು ದಿಃ13-03-2026

ಹೆಸರು : ಬಾಪುಗೌಡ

ತಂದೆ ಹೆಸರು : ಸಿದ್ದನಗೌಡ ಪಾಟೀಲ್

ವಯಸ್ಸು : 41 ವರ್ಷ

ಉದ್ಯೋಗ : ಪಿ ಐ ಲೋಕಾಯುಕ್ತ ಆದೇಶದಲ್ಲಿರುವವರು

ವಾಸಸ್ಥಳ : ಬೀದರ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 01-10-2014 ರಿಂದ 08-06-2016 ವರೆಗೂ ಸೇಡಂ ಪಿ ಎಸ್ ನಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ01-03-2015 ರಂದು ಚಾ ಸಾ 10 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು, ಅದೇ ದಿನ ಎಫ್ ಎಸ್ ಎಲ್ ಮಡಿವಾಳ ಬೆಂಗಳೂರಿನಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು. ಆರೋಪಿತರ ವಿರುದ್ದ ಆರೋಪ ಸಾಬೀತಾಗಿರುವುದರಿಂದ ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರಿ ವಿ ಜೆ ಎಂ ವಕೀಲರಿಂದ:

ನಾನು ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ಫಿರ್ಯಾದುದಾರರು ಆಂಗ್ಲ ಭಾಷಯಲ್ಲಿ ಫಿರ್ಯಾದಿಯನ್ನು ನೀಡಿದ್ದರು. ಫಿರ್ಯಾದುದಾರರು ಮೊದಲು ಅಂಗಡಿಗೆ ಹೋಗಿ ತದ ನಂತರ ಠಾಣೆಗೆ ಬಂದು ದೂರನ್ನು ನೀಡಿದ್ದಾರೆ ನನಗೆ ಗೊತ್ತಿಲ್ಲ. ಆರೋಪಿತರು ಯಾವುದೇ ಆರೋಪಿ ಮಾಡದೇ ಇದ್ದರುಸಹ ಹಾಗೂ ಅವರ ವಿರುದ್ದ ಯಾವುದೇ ಆರೋಪಿ ಸಾಬೀತು ಆಗದೇ ಇದ್ದರು ಸಹ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

ಪ್ರ. ದ. ನ್ಯಾ. ದಂ. ಸೇಡಂ.